# ಕರ್ನಾಟಕ ಲೋಕಾಯುಕ್ತ

**ಕರಡು ವರದಿ**

ಸಂಖ್ಯೆ: ಕಂಪ್ಲೇಂಟ್/ಉಪಲೋಕ್/ಜಿಎಲ್‌ಬಿ/2985/2015/ಅ.ನಿ.ವಿ-4

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು-560 001.
Email ID: kla-are4@nic.in

ದಿನಾಂಕ 01/09/2016.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರಡಿಯ ವರದಿ

**ವಿಷಯ:** ರಾಯಚೂರು ಜಿಲ್ಲಾ ದೇವದುರ್ಗ ತಾಲ್ಲೂಕಿನ ಪುರಸಭೆಯ ಮುಖ್ಯಾಧಿಕಾರಿಯಾದ ಶ್ರೀ ಚಂದ್ರಶೇಖರ್ (ಹಾಲಿ ಉಪಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ, ವಿಕಾಸ ಸೌಧ, ಬೆಂಗಳೂರು) ರವರು 2009-10ನೇ ಸಾಲಿಗೆ ಎಸ್.ಎಫ್.ಸಿ. ಯೋಜನೆಯಡಿ ದೇವದುರ್ಗ ಪುರಸಭೆಗೆ, ರೂ. 3,00,000/- ಗಳಲ್ಲಿ ಖರೀದಿಸಿರುವ ಪಠ್ಯ ಪುಸ್ತಕ ಮತ್ತು ನೋಟ್‌ಬುಕ್‌ಗಳನ್ನು ಸಮರ್ಪಕವಾಗಿ ವಿತರಣೆ ಮಾಡಿದ ಬಗ್ಗೆ ದಾಖಲಾತಿಗಳನ್ನು ನಿರ್ವಹಿಸಿಲ್ಲ ಮತ್ತು ನಿಯಮಗಳನ್ನು ಉಲ್ಲಂಘಿಸಿ ಪುಸ್ತಕಗಳನ್ನು ಕೇಂದ್ರ ಗ್ರಂಥಾಲಯಕ್ಕೆ ಸರಬರಾಜು ಮಾಡಿ ಕರ್ತವ್ಯ ಲೋಪವೆಸಗಿರುವ ಬಗ್ಗೆ

– * –

ಶ್ರೀ ಅಳ್ಳಪ್ಪ ತಂದೆ ಬಸನಗೌಡ, ಗೌತಮ್ ಓಣಿಯ ಮನೆ ನಂ. 6-1-54, ದೇವದುರ್ಗ ಟೌನ್ ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುವ) ರವರು ಶ್ರೀ ಚಂದ್ರಶೇಖರ್, ಪುರಸಭೆಯ ಮುಖ್ಯಾಧಿಕಾರಿಯವರು, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ ಹಾಲಿ ಉಪಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ, ವಿಕಾಸ ಸೌಧ, ಬೆಂಗಳೂರು) (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುವ) ರವರ ವಿರುದ್ಧ ಈ ದೂರನ್ನು ಸಲ್ಲಿಸಿದ್ದು, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ.9ರಡಿ ತನಿಖೆಗೆ ಕೈಗೆತ್ತಿಕೊಂಡಿದ್ದಿದೆ.

2. <u>ದೂರಿನ ಸಂಕ್ಷಿಪ್ತ ಆಪಾದನೆಗಳು</u>:-

ದೂರುದಾರರು ತಮ್ಮ ದೂರಿನಲ್ಲಿ ಎದುರುದಾರರು 2009-10ನೇ ಸಾಲಿಗೆ ಎಸ್.ಎಫ್.ಸಿ. ಯೋಜನೆಯಡಿ ದೇವದುರ್ಗ ಪುರಸಭೆಗೆ, ಪಿ.ಯು.ಸಿ. ಪದವಿ ಹಾಗೂ ಉನ್ನತ ಪದವಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಹಾಗೂ ನೋಟ್‌ಬುಕ್ ವಿತರಿಸಲು ರೂ. 3.00 ಲಕ್ಷ ಅನುದಾನ

ಬಿಡುಗಡೆಯಾಗಿದ್ದು, ಎದುರುದಾರರು ಪುಸ್ತಕ ಖರೀದಿಸಿದ ಅಂಗಡಿ, ಖರೀದಿ ಬಿಲ್ಲು, ಮೊತ್ತ ಇತ್ಯಾದಿ ವಿವರ ನೀಡಿಲ್ಲವಾಗಿದ್ದು, ಬಿಡುಗಡೆಯಾದ ಹಣದಲ್ಲಿ ಅವ್ಯವಹಾರವಾಗಿದ್ದು ತನಿಖೆ ಕೈಗೊಳ್ಳಬೇಕೆಂದು ಕೋರಿದ್ದಾರೆ.

3. ನಂತರ ಗೌರವಾನ್ವಿತ ಉಪಲೋಕಾಯುಕ್ತರ ಆದೇಶದಂತೆ, ದೂರಿನ ಪ್ರತಿ ಮತ್ತು ಅದಕ್ಕೆ ಲಗತ್ತಾದ ದಾಖಲಾತಿಗಳನ್ನು ಎದುರುದಾರರಿಗೆ ಕಳುಹಿಸಿ ಆಕ್ಷೇಪಣೆಯನ್ನು ಸಲ್ಲಿಸಲು ಸೂಚಿಸಿದ್ದರೂ ಸಹ ಯಾವ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

4. ನಂತರ ಪ್ರಕರಣದ ಗಂಭೀರತೆಯನ್ನು ಪರಿಗಣಿಸಿ, ಪ್ರಕರಣವನ್ನು ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ರಾಯಚೂರು (ಇನ್ನು ಮುಂದೆ "ತನಿಖಾಧಿಕಾರಿ" ಎಂದು ಕರೆಯಲ್ಪಡುವ) ರವರಿಗೆ ಕಳುಹಿಸಿ ಸಮಗ್ರವಾದ ತನಿಖೆಯನ್ನು ನಡೆಸಿ ವರದಿಯನ್ನು ಸಲ್ಲಿಸಲು ಸೂಚಿಸಲಾಗಿತ್ತು.

5. ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ರಾಯಚೂರು ರವರು ದಿನಾಂಕ: 16/03/2016 ರಂದು ವರದಿಯನ್ನು ನೀಡಿ ಎದುರುದಾರರು ದೇವದುರ್ಗ ಪುರಸಭೆಯ ಮುಖ್ಯಾಧಿಕಾರಿಯಾಗಿದ್ದಾಗ ಎಸ್.ಎಫ್.ಸಿ. ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ರೂ. 3,00,000/- ಗಳಲ್ಲಿ ಖರೀದಿಸಿರುವ ಪಠ್ಯ ಪುಸ್ತಕ ಮತ್ತು ನೋಟ್‌ಬುಕ್‌ಗಳನ್ನು ಸಮರ್ಪಕವಾಗಿ ವಿತರಣೆ ಮಾಡಿದ ಬಗ್ಗೆ ದಾಖಲಾತಿಗಳನ್ನು ನಿರ್ವಹಿಸಿಲ್ಲ ಮತ್ತು ನಿಯಮಗಳನ್ನು ಉಲ್ಲಂಘಿಸಿ ಪುಸ್ತಕಗಳನ್ನು ಕೇಂದ್ರ ಗ್ರಂಥಾಲಯಕ್ಕೆ ಸರಬರಾಜು ಮಾಡಿ ಕರ್ತವ್ಯ ಲೋಪವೆಸಗಿರುತ್ತಾರೆಂದು ವಿವರವಾದ ವರದಿಯನ್ನು ನೀಡಿರುತ್ತಾರೆ.

6. ತನಿಖಾ ವರದಿಯನ್ನು ಎದುರುದಾರರಿಗೆ ಹಾಲಿ ಅವರು ಕಾರ್ಯ ನಿರ್ವಹಿಸುತ್ತಿದ್ದ ಉಪಕಾರ್ಯದರ್ಶಿ, ಸರ್ಕಾರದ ವೈದ್ಯಕೀಯ ಇಲಾಖೆ, ವಿಕಾಸ ಸೌಧ, ಬೆಂಗಳೂರಿನ ವಿಳಾಸಕ್ಕೆ ಕಳುಹಿಸಿದರೂ ಸಹ ಅವರು ಇಲ್ಲಿಯವರೆವಿಗೆ ಯಾವ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

7. ದೂರು ಮತ್ತು ಅದಕ್ಕೆ ಲಗತ್ತಾದ ದಾಖಲಾತಿಗಳು ಮತ್ತು ತನಿಖಾ ವರದಿ ಮತ್ತು ಅದಕ್ಕೆ ಲಗತ್ತಾದ ದಾಖಲಾತಿಗಳನ್ನು ಕೂಲಕಂಷವಾಗಿ ಪರಿಶೀಲನೆ ಮಾಡಲಾಗಿರುತ್ತದೆ.

8. ಎದುರುದಾರರು ದೇವದುರ್ಗ ಪುರಸಭೆಯ ಮುಖ್ಯಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ ಎಸ್.ಎಫ್.ಸಿ. ಯೋಜನೆಯಡಿಯಲ್ಲಿ 2009-10ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಪಿ.ಯು. ಸಿ ಮತ್ತು ಉನ್ನತ ಪದವಿ

ತರಗತಿಗಳ ಪಠ್ಯ ಪುಸ್ತಕಗಳನ್ನು ವಿತರಣೆ ಮಾಡಲು ರೂ.3,00,000/-ಗಳ ಹಣದಲ್ಲಿ ಖರೀದಿಸಿದ್ದು, ವಿದ್ಯಾರ್ಥಿಗಳಿಗೆ ಸಮರ್ಪಕವಾಗಿ ವಿತರಣೆ ಮಾಡಿಗುವುದಿಲ್ಲ ಮತ್ತು ವಿತರಣೆ ಮಾಡಿದ ಬಗ್ಗೆ ದಾಖಲೆಗಳು ನಿರ್ವಹಿಸಿಲ್ಲವೆಂದು ಕಂಡು ಬಂದಿದ್ದಲ್ಲದೇ ಮತ್ತು ಅವರು ಅವುಗಳಲ್ಲಿ 39 ಪಠ್ಯ ಪುಸ್ತಕಗಳನ್ನು ದೇವದುರ್ಗ ಕೇಂದ್ರ ಗ್ರಂಥಾಲಯಕ್ಕೆ ಸರಬರಾಜು ಮಾಡಿ ಸರ್ಕಾರದ ಯೋಜನೆಗಳ ನಿಯಮಗಳನ್ನು ಉಲ್ಲಂಘಿಸಿ ಕರ್ತವ್ಯ ಲೋಪವೆಸಗಿರುವುದು ಕಂಡು ಬಂದಿರುತ್ತದೆ.

9. ಈ ಪ್ರಕರಣದ ದೂರಿನ ಸಂಗತಿಗಳು ಮತ್ತು ದಾಖಲೆಗಳನ್ನು ಗಣನೆಗೆ ತೆಗೆದುಕೊಂಡಾಗ ಎದುರುದಾರರ ವಿರುದ್ಧದ ತನಿಖೆಯನ್ನು ಕೈಬಿಡಲು ಯಾವುದೇ ತೃಪ್ತಿಕರ/ಸಮಾಧಾನಕರ ಕಾರಣಯಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

10. ಎದುರುದಾರರು ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ನಿಷ್ಠೆ ತೋರದೇ, ಕರ್ತವ್ಯ ಲೋಪವೆಸಗಿ, ಅವ್ಯವಹಾರದ ದುರ್ನಡತೆಯಿಂದ ವರ್ತಿಸಿ ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ನಿಯಮ 3 (1)(i) ರಿಂದ (iii) ರನ್ನು ಉಲ್ಲಂಘಿಸಿದ ಬಗ್ಗೆ ಶಿಸ್ತು ಕ್ರಮಕ್ಕೆ ಅರ್ಹರಾಗಿದ್ದಾರೆಂದು ಮೇಲ್ನೋಟಕ್ಕೆ ತೋರುತ್ತಿದ್ದುದರಿಂದ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮ 1957ರ ನಿಯಮ 14-ಎ ರನ್ವಯ ಎದುರುದಾರರ ವಿರುದ್ಧ ವಿಚಾರಣೆ ಮಾಡಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3)ರನ್ವಯ ಪ್ರದತ್ತವಾದ ಅಧಿಕಾರದಡಿ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

11. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(4)ರ ಪ್ರಕಾರ ಶಿಸ್ತು ಪ್ರಾಧಿಕಾರವು ಎದುರುದಾರರ ಕ್ರಮ ಕೈಗೊಂಡು/ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸಲು ಸೂಚಿಸಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

**(ನ್ಯಾಯಮೂರ್ತಿ ಎನ್. ಆನಂದ)**
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು.